# ಆಹಾ ಸುದ್ದಿ!

★ ಸಸಿತೋಟ

ಅಮೆರಿಕದ ಕೊಲರೆಡೊ ನಗರದಲ್ಲಿ ಜನರ ಬೈಸಿಕಲ್ ಹುಚ್ಚು ಎಷ್ಟಿದೆಯೆಂದರೆ ಅಪಘಾತವಾದಾಗ ಆಸ್ಪತ್ರೆಗೆ ಕರೆದೊಯ್ಯುವ ಆ್ಯಂಬುಲೆನ್ಸ್‌ನಲ್ಲೂ ಬೈಸಿಕಲ್ ರ‍್ಯಾಕ್ ಮಾಡಿದ್ದಾರಂತೆ. ಅಪಘಾತಕ್ಕೀಡಾದ ವ್ಯಕ್ತಿಗಳು ತಮ್ಮ ದುಬಾರಿ ಬೈಸಿಕಲ್ ರಸ್ತೆಯಲ್ಲೋ, ರಸ್ತೆಯ ಪಕ್ಕದಲ್ಲೋ ಬಿಡಲಿಕ್ಕೆ ಸಿದ್ಧರಿರದ ಕಾರಣ ಈ ವ್ಯವಸ್ಥೆಯಂತೆ. ಗಾಯಗೊಂಡ ವ್ಯಕ್ತಿ, ಗಾಯಗೊಂಡ ಸೈಕಲ್ ಎರಡಕ್ಕೂ ಒಂದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವ ವ್ಯವಸ್ಥೆಯೂ ಬರಬಹುದು.



ಚೀನಾದಲ್ಲಿ ಕಂಡು ಹಿಡಿದ ಗುರುತ್ವಾಕರ್ಷಣೆ ವಿರುದ್ಧ ಪ್ರಯೋಗಿಸುವ ಯೋಗವಿದು. ಬೆನ್ನುಹುರಿಯ ಮೇಲಿನ ಒತ್ತಡ ಹೊರಹಾಕಿ, ದೇಹವನ್ನು ಸಪೂರ ಮಾಡುವುದಂತೆ. ಊಟಕ್ಕಿಂತ ಮುಂಚೆ ಮಾಡುವುದರ ಬದಲು ಊಟದ ನಂತರ ಮಾಡಿದರೆ ತಿಂದದ್ದೆಲ್ಲ ಗುರುತ್ವಾಕರ್ಷಣೆ ಶಕ್ತಿಯಿಂದ ಕೆಳಗೆ ಬಿದ್ದು, ಝೀರೋ ಫಿಗರ್ ಬರಬಹುದು.



ಟರ್ಕಿಯಲ್ಲಿ ಈಗ ಒಂಟೆಗಳ ಮೇಳದ ಸಡಗರ. ಅದರಲ್ಲೂ ಒಂಟೆಗಳ ಕುಸ್ತಿ ವಿಶ್ವವಿಖ್ಯಾತ. ಅದಕ್ಕೂ ಮುನ್ನ ನಡೆಯುವ ಒಂಟೆ ಸೌಂದರ್ಯ ಸ್ಪರ್ಧೆಗೆ ಈ ಒಂಟೆ ಮೇಕಪ್ ಮಾಡಿಕೊಂಡು ಸಜ್ಜಾಗಿದೆ. ಕುಸ್ತಿಯ ನಂತರ ಮೈ- ಕೈ ಮುರಿಸಿಕೊಂಡ ಒಂಟೆಗಳಿಗೆ ಸೌಂದರ್ಯ ಸ್ಪರ್ಧೆ ನೋಡುವ ತಾಕತ್ತೆಲ್ಲಿರುತ್ತದೆ, ಅದಕ್ಕೇ ಮೊದಲೇ ಕ್ಯಾಮಲ್‌ವಾಕ್ ನಡೆದುಬಿಡುತ್ತದೆ.



ಗುಡಗಾಂವ್‌ನ ಈ ಪೊಲೀಸ್ ಪೇದೆ ರಾಜೇಶ್ ಕುಮಾರ್ ಎತ್ತರ ಏಳಡಿ ಒಂದಿಂಚು. ಭಾರತದ ಅತ್ಯಂತ ಎತ್ತರದ ಪೊಲೀಸ್. ಗುಡಗಾಂವ್‌ನಲ್ಲಿ ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲು ಈತನನ್ನು ನೇಮಿಸಲಾಗಿದೆಯಂತೆ. ಆದರೆ ವಾಹನ ಸವಾರರು ಈತನ ಆಟೋಗ್ರಾಫ್, ಫೋಟೋಗ್ರಾಫ್ ಎಂದು ಮುಗಿಬೀಳುತ್ತಿದ್ದಾರಂತೆ. ಸಂಚಾರ ನಿಯಂತ್ರಣದ ಬದಲು ಸಂಚಾರ ದಟ್ಟಣೆಯ ಪಾಠ ಹೇಳಿಕೊಡುತ್ತಿದ್ದಾರೆ ಸವಾರರು.



ಇದು ಅಂತಿತಹ ವೈನಲ್ಲ, ಪ್ರಪಂಚದಲ್ಲೇ ಅತ್ಯಂತ ಹಳೆಯ ಮದ್ಯ. 1472ರಿಂದ ಫ್ರಾನ್ಸ್‌ನ ಸ್ಟ್ರಾಸ್‌ಬೋರ್ಗ್‌ನಲ್ಲಿ ಅತ್ಯಂತ ಜತನದಿಂದ ಕಾಪಿಡಲಾಗಿದೆ. ಬ್ಯಾರಲ್‌ನಲ್ಲಿದ್ದ ಈ ಮದ್ಯ ಈಗ ಯಾಕೆ ಹೊರಬಂತು ಎಂದರೆ ಹಳೆಯ ಬ್ಯಾರಲ್ ಕುಡಿದು ಕುಡಿದು ಚಿತ್ತಾಗಿ ಕಟವಾಯಿಯಿಂದ ಸೋರಲಾರಂಭಿಸಿತಂತೆ. ಅದಕ್ಕೇ ಹಳೆಯ ಬ್ಯಾರೆಲ್‌ಗೆ ಗತಿ ಕಾಣಿಸಿ ಹೊಸ ಬ್ಯಾರೆಲ್‌ಗೆ ಸೇರಿಸಲಾಯಿತು.

ನ್ಯೂಯಾರ್ಕ್‌ನ ಮಿಡ್ಲ್‌ಟೌನಿನಲ್ಲಿ ಆ್ಯಂಡ್ರಿಷಾಕ್ ತನ್ನ ಹೆಂಡತಿ ಶಾಪಿಂಗ್‌ಗೆ ಹೋಗಿ ಬರುವುದರೊಳಗೆ ಬುಲ್ಡೋಜರ್ ತಂದು ಮನೆಯನ್ನು ಉರುಳಿಸಿ ಹಾಕಿದ್ದ. ಮನೆಯೊಳಗಿದ್ದ ಪೀಠೋಪಕರಣ, ಆಕೆ- ಆತನ ಉಡುಪುಗಳು, ಮತ್ತಿತರ ಸಾಮಾನುಗಳೆಲ್ಲ ಮನೆಯ ಅವಶೇಷದ ಅಡಿಗೆ. ಅಷ್ಟು ತರಾತುರಿಯಲ್ಲಿ ಮನೆ ಕೆಡವಿ ಹಾಕಲು ಆತ ಕೊಟ್ಟ ಕಾರಣ- ಮನೆ ಹಳೆಯದಾಗಿತ್ತು ಎಂದು. ಆತನ ಹೆಂಡತಿಯ ಶಾಪಿಂಗ್ ಅವಧಿ ಅಷ್ಟು ದೀರ್ಘವಾಗಿತ್ತೇ?